# ಸಿಂಡಿಕೇಟ್ ಸಭೆಯ ನಡವಳಿಗಳು

ದಿನಾಂಕ 21.06.2023 ರಂದು ಬುಧುವಾರ ಮಧ್ಯಾಹ್ನ 12.30 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ಜರುಗಿದ ತುರ್ತು ಸಿಂಡಿಕೇಟ್ ಸಭೆಯ ನಡವಳಿಗಳು.

## ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು

| | | |
|---|---|---|
| 1. | ಪ್ರೊ.ಹರೀಶ್ ರಾಮಸ್ವಾಮಿ, ಮಾನ್ಯ ಕುಲಪತಿಗಳು | ಅಧ್ಯಕ್ಷರು |
| 2. | ಶ್ರೀ.ಶಿವಬಸಪ್ಪ ಮಾಲಿಪಾಟೀಲ | ಸಿಂಡಿಕೇಟ್ ಸದಸ್ಯರು |
| 3. | ಶ್ರೀ.ನಾಗೇಂದ್ರ ಪ್ರಸಾದ ಎ.ಎಂ | ಸಿಂಡಿಕೇಟ್ ಸದಸ್ಯರು (ಆನಲೈನ್ ಮುಖಾಂತರ) |
| 4. | ಡಾ.ಅರುಣಕುಮಾರಿ ಟಿ. | ಸಿಂಡಿಕೇಟ್ ಸದಸ್ಯರು |
| 5. | ಡಾ.ಚನ್ನಬಸಪ್ಪ ಕುಂಬಾರ | ಸಿಂಡಿಕೇಟ್ ಸದಸ್ಯರು (ಆನಲೈನ್ ಮುಖಾಂತರ) |
| 6. | ಡಾ.ಕೆ.ಸುಭಾಷಚಂದ್ರ | ಸಿಂಡಿಕೇಟ್ ಸದಸ್ಯರು |
| 7. | ಪ್ರೊ.ಪಾರ್ವತಿ ಸಿ.ಎಸ್. | ಸಿಂಡಿಕೇಟ್ ಸದಸ್ಯರು |
| 8. | ಪ್ರೊ.ಯರಿಸ್ವಾಮಿ ಎಂ. ಕುಲಸಚಿವರು(ಮೌಲ್ಯಮಾಪನ) | ಸಿಂಡಿಕೇಟ್ ಸದಸ್ಯರು |
| 9. | ಪ್ರೊ.ವಿಶ್ವನಾಥ ಎಂ. ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲನೆಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ಸಿಂಡಿಕೇಟ್ ಸದಸ್ಯರುಗಳನ್ನು ಸ್ವಾಗತಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

| ಐಟಂ. ನಂ. | ವಿಷಯ | ನಿರ್ಣಯ |
|---|---|---|
| 01 | ರಾಯಚೂರು ವಿಶ್ವವಿದ್ಯಾಲಯದ 2023-24 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ (For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳ ತಾತ್ಕಾಲಿಕ/ಶಾಶ್ವತ ಸಂಯೋಜನೆಗಳ ಮುಂದುವರಿಕೆ/ವಿಸ್ತರಣೆ ಮತ್ತು ಹೊಸ ಕಾಲೇಜು, ಹೊಸ ವಿಷಯ, ಹೊಸ ಕೋರ್ಸ, ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ ಕಾಲೇಜುಗಳು ಆನ್ ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ತುರ್ತಾಗಿ ಸರ್ಕಾರಕ್ಕೆ ಕಳುಹಿಸಿ ಕೊಡುವ ಕುರಿತು. | 1) ರಾಯಚೂರು ವಿಶ್ವವಿದ್ಯಾಲಯದ 2023-24 ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ (For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳ ತಾತ್ಕಾಲಿಕ/ಶಾಶ್ವತ ಸಂಯೋಜನೆಗಳ ಮುಂದುವರಿಕೆ/ವಿಸ್ತರಣೆ ಮತ್ತು ಹೊಸ ಕಾಲೇಜು, ಹೊಸ ವಿಷಯ, ಹೊಸ ಕೋರ್ಸ, ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ ಕಾಲೇಜುಗಳು ಆನ್‌ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಸ್ಥಳೀಯ ತನಿಖಾ ತಂಡ ಭೇಟಿ ನೀಡಿ ಪರಿಶೀಲಿಸಿ, ತನ್ನ ವರದಿಯನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುತ್ತದೆ. ಆ ವರದಿಯನ್ನು ಕುಲಂಕೂಶವಾಗಿ ಚರ್ಚಿಸಿ, ವಿದ್ಯಾ ವಿಷಯಕ ಪರಿಷತ್ ಸಭೆಯಲ್ಲಿ ವರದಿಯನ್ನು ಪರಿಶೀಲಿಸಿ, ಚರ್ಚಿಸಿ, ನಿಯಮಾನುಸಾರ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಕುಲಂಕೂಶವಾಗಿ ಪರಿಶೀಲಿಸಿ, ವಿದ್ಯಾ ವಿಷಯಕ ಪರಿಷತ್ ಸಭೆಯ ನಿರ್ಣಯದಂತೆ ಅನುಮೋದಿಸಲಾದ ವರದಿಯನ್ನು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಸ್ವೀಕರಿಸಿ ಅನುಮೋದನೆ ನೀಡಿತು. ವರದಿಯಲ್ಲಿರುವ ಶಿಫಾರಸ್ಸುಗಳನ್ನು ಮುಂದಿನ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಯಿತು. |

| | | |
|---|---|---|
| 02 | ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಇವರಿಂದ ಆಯೋಜಿಸಲಾದ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ದಿನಾಂಕ 28.05.2023 ರಿಂದ 08.06.2023 ರ ವರೆಗೆ ರಾಯಚೂರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಯು.ಕೆ. ದೇಶದ ಭೇಟಿಯ ಕುರಿತು ಘಟನೋತ್ತರ ಅನುಮೋದನೆ ನೀಡುವ ಕುರಿತು. | 2) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಹಾಗೂ ಬ್ರಿಟಿಷ್ ಕೌನ್ಸಿಲ್ ಸಂಯುಕ್ತಾಶ್ರಯದಲ್ಲಿ ಯು.ಕೆ. ದೇಶದಲ್ಲಿ ಆಯೋಜಿಸಲಾದ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮಕ್ಕೆ ಮಾನ್ಯ ಕುಲಪತಿಗಳು ದಿನಾಂಕ 28.05.2023 ರಿಂದ 08.06.2023 ರವರೆಗೆ ಹಾಜರಾಗಿರುವುದನ್ನು ಸಭೆಯು ಘಟನೋತ್ತರ ಅನುಮೋದನೆಯನ್ನು ಅನುಸಮರ್ಥಿಸಿ, ಅನುಮೋದನೆ ನೀಡಿತು. |
| 03. | **ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳ ಚರ್ಚೆ.** | |
| 01. | ಕುಲಸಚಿವರು, ಶ್ರೀ ಪಂಪಾಪತಿ ಬಡಿಗೇರ್ ಕಾರ್ಯನಿರ್ವಾಹಕ ಅಭಿಯಂತರರು ಇವರನ್ನು ಕುಲಪತಿಗಳ ಅಧಿಕಾರದಡಿಯಲ್ಲಿ 11 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಸಂಚಿತ ವೇತನದಡಿಯಲ್ಲಿ ವಿಶ್ವವಿದ್ಯಾಲಯಕ್ಕೆ ದಿನಾಂಕ 01.04.2022 ರಂದು ನೇಮಿಸಲಾಗಿತ್ತು. ದಿನಾಂಕ 28.02.2023 ರಂದು ಅವರ ಅವಧಿ ಮುಕ್ತಾಯಗೊಂಡಿರುತ್ತದೆ. ಇವರನ್ನು ಮುಂದುವರೆಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲು ಅಧ್ಯಕ್ಷರ ಅನುಮತಿ ಕೋರಿದರು. | 1) ಕುಲಪತಿಗಳ ಅಧಿಕಾರದಡಿಯಲ್ಲಿ ಶ್ರೀ ಪಂಪಾಪತಿ ಬಡಿಗೇರ್ ಕಾರ್ಯನಿರ್ವಾಹಕ ಅಭಿಯಂತರರು ಇವರ ಸೇವಾ ಅವಧಿ ದಿನಾಂಕ 28.02.2023 ರಂದು ಅವರ ಅವಧಿ ಮುಕ್ತಾಯಗೊಂಡಿದ್ದು, ಇವರ ಸೇವಾ ಅವಧಿಯನ್ನು ಮುಂದುವರೆಸಲು ಚರ್ಚೆಗೆ ಮಂಡಿಸಲಾಯಿತು. ಶ್ರೀ ಶಿವಬಸಪ್ಪ ಮಾಲಿಪಾಟೀಲ ಸಿಂಡಿಕೇಟ್ ಸದಸ್ಯರು, ಇವರು ಈ ವಿಚಾರವಾಗಿ ಚರ್ಚಿಸಿ, ಶ್ರೀ. ಪಂಪಾಪತಿ ಬಡಿಗೇರ್ ಅವರಿಗೆ ಇಂಜಿನೀಯರ್ ಹುದ್ದೆಗೆ ಇರಬೇಕಾದ ವಿದ್ಯಾರ್ಹತೆ ಇಲ್ಲ ಎಂಬುದಾಗಿ ಹೇಳಿದರು. ಶ್ರೀ. ಪಂಪಾಪತಿ ಬಡಿಗೇರ್ ಅವರ ಬಯೋಡಟಾವನ್ನು ಸಭೆಗೆ ಹಾಜರಿಪಡಿಸಿ, ಪರಿಶೀಲಿಸಿ ನೋಡಿದಾಗ ಇವರು B.Tech ವಿದ್ಯಾರ್ಹತೆ ಹೊಂದಿರುವುದು ದೃಢಪಟ್ಟಿರುತ್ತದೆ ಹಾಗೂ ಈ ವಿದ್ಯಾರ್ಹತೆಯು AEE ಹುದ್ದೆಗೆ ಅರ್ಹರಾಗಿರುತ್ತದೆ ಎಂದು ಮಾನ್ಯ ಕುಲಪತಿಗಳು ಸಿಂಡಿಕೇಟ್ ಸಭೆಗೆ ಈ ವಿಚಾರವನ್ನು ತಿಳಿಸಿ, ಸರ್ಕಾರವು ವಿಶ್ವವಿದ್ಯಾಲಯಕ್ಕೆ AEE ಹುದ್ದೆ ತುಂಬಿಕೊಳ್ಳಲು ಅನುಮತಿ ನೀಡುವರೆಗೂ ವಿಶ್ವವಿದ್ಯಾಲಯದ ಅಭಿವೃದ್ಧಿ ಕಾರ್ಯಗಳಿಗೆ ನೇಮಿಸಿಕೊಳ್ಳಲಾಗಿದ್ದು, ಇವರನ್ನು ಮುಂದುವರೆಸಬೇಕೆಂದು ಸಭೆಯಲ್ಲಿ ತಿಳಿಸಿದರು. ಶ್ರೀ ಶಿವಬಸಪ್ಪ ಮಾಲಿಪಾಟೀಲ ಸಿಂಡಿಕೇಟ್ ಸದಸ್ಯರು, ಇವರು ಈ ವಿಷಯಕ್ಕೆ ತಮ್ಮ ಅಸಮತಿಯನ್ನು ಸೂಚಿಸಿದರು. ಉಳಿದ ಎಲ್ಲಾ ಸಿಂಡಿಕೇಟ್ ಸದಸ್ಯರು, ಕುಲಪತಿಗಳ ನಿರ್ಣಯಕ್ಕೆ ಬೆಂಬಲ ಸೂಚಿಸಿ, ಶ್ರೀ ಪಂಪಾಪತಿ ಬಡಿಗೇರ್ ಅವರನ್ನು 11 ತಿಂಗಳಿಗೆ ಅಥವಾ ಮುಂದಿನ ಆದೇಶದವರೆಗೆ ಮುಂದುವರಿಸಿ ಅವರಿಗೆ ಪ್ರತಿ ತಿಂಗಳಿಗೆ 50 ಸಾವಿರ ರೂ. ಸಂಚಿತ ವೇತನ ನಿಗದಿಪಡಿಸಲಾಯಿತು. (ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ) ಮಾನ್ಯ ಕುಲಪತಿಗಳು ತೆಗೆದುಕೊಂಡ ನಿರ್ಧಾರವನ್ನು ಸಿಂಡಿಕೇಟ್ ಸಭೆಯು ಅನುಮೋದನೆ ನೀಡಿತು. |
| 02. | ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗಕ್ಕೆ ಬೇಕಾದ ಕಾರ್ಯಭಾರಕ್ಕೆ ಅನುಗುಣವಾಗಿ ದಿನಗೂಲಿ ಕೆಲಸಗಾರರನ್ನು ತೆಗೆದುಕೊಳ್ಳುವ ಬಗ್ಗೆ ಕುಲಸಚಿವರು ಮೌಲ್ಯಮಾಪನ, ಪ್ರೊ.ಯರಿಸ್ವಾಮಿ ಎಂ. | 2) ರಾಯಚೂರು ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ವಿಭಾಗದಲ್ಲಿ ಸುಮಾರು 203 ಕಾಲೇಜುಗಳಲ್ಲಿ ಪರೀಕ್ಷಾ ಕಾರ್ಯಗಳು ನಡೆಯುತ್ತಿದ್ದು, ಕಾಲೇಜುಗಳ ಉತ್ತರ ಪತ್ರಿಕೆ ಮತ್ತು ಪ್ರಶ್ನೆ ಪತ್ರಿಕೆ ವಿತರಣೆ ಹಾಗೂ ಹಿಂದುರಿಗಿ ಬರುವ ಉತ್ತರ ಪತ್ರಿಕೆಗಳು ಸುಮಾರು 3 ಲಕ್ಷ ಮೀರಿದ್ದು, ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿ |

| | | |
|---|---|---|
| | ಅವರು ಚರ್ಚೆಗೆ ವಿಷಯವನ್ನು ಮಂಡಿಸಲು ಅಧ್ಯಕ್ಷರ ಅನುಮತಿ ಕೋರಿದರು. | ಕೊರತೆಯಿರುವುದರಿಂದ 3 ಲಕ್ಷ ಉತ್ತರ ಪತ್ರಿಕೆಗಳನ್ನು ವಿಂಗಡಿಸಿ ತಾಂತ್ರಿಕ ಅಧಿಕಾರಿಗಳ ಮೌಲ್ಯಮಾಪನ ಯೋಜನೆ ಪ್ರಕಾರವಾಗಿ ವಿಂಗಡಿಸಿ ವಿಷಯವಾರು ಹಾಗೂ ಇನ್ನೂಳಿದ ಮೌಲ್ಯಮಾಪನ ಕಾರ್ಯಗಳು ಕೈಗೊಳ್ಳಬೇಕಾಗಿರುವುದರಿಂದ, ಕಾರ್ಯಭಾರಕ್ಕೆ ಅನುಗುಣವಾಗಿ, ದಿನಗೂಲಿ ಕೆಲಸಗಾರರನ್ನು ತೆಗೆದುಕೊಳ್ಳಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕೋರಿದರು. ಈ ಬಗ್ಗೆ ಕುಲಂಕೂಶವಾಗಿ ಚರ್ಚಿಸಿ, ಸಭೆಯು, ಕಾರ್ಯಭಾರದ ಅನುಗುಣವಾಗಿ ಹಾಗೂ ಕಾರ್ಯ ಮುಗಿದ ನಂತರ ದಿನಗೂಲಿ ಕೆಲಸಗಾರರನ್ನು ಬಿಡುಗಡೆ ಮಾಡಬೇಕೆಂದು ನಿರ್ಣಯಿಸಿ, ಅವರಿಗೆ ತಗಲುವ ದಿನಗೂಲಿಯನ್ನು (ಸರ್ಕಾರದ ಸುತ್ತೋಲೆ ಪ್ರಕಾರ) ಪರೀಕ್ಷಾ ಶುಲ್ಕದಲ್ಲಿ ಸಂಗ್ರಹಗೊಂಡಿರುವ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ನೀಡಬೇಕು ಎಂದು ಸಭೆಯು ನಿರ್ಣಯಿಸಿ, ಕುಲಸಚಿವರು ಮೌಲ್ಯಮಾಪನ ಪ್ರಸ್ತಾವನೆಯನ್ನು ಅನುಮೋದಿಸಿ ನಿರ್ಣಯಿಸಲಾಯಿತು. |
| 03. | ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಪ್ರಯೋಗಾಲಯಗಳಿಗೆ ಬೇಕಾಗಿರುವ ಸಹಾಯಕರ ಅಗತ್ಯದ ಬಗ್ಗೆ ಚರ್ಚಿಸಲು ಪ್ರೊ.ಪಾರ್ವತಿ ಸಿ.ಎಸ್. ಡೀನರು ಹಾಗೂ ವಿಜ್ಞಾನ ವಿಭಾಗದ ಮುಖ್ಯಸ್ಥರು, ಅಧ್ಯಕ್ಷರ ಅನುಮತಿ ಕೋರಿದರು. | 3) ಪ್ರೊ.ಪಾರ್ವತಿ ಸಿ.ಎಸ್. ಡೀನರು ಹಾಗೂ ವಿಜ್ಞಾನ ವಿಭಾಗದ ಮುಖ್ಯಸ್ಥರು ಇವರು ರಾಯಚೂರು ವಿಶ್ವವಿದ್ಯಾಲಯದಲ್ಲಿ ಒಟ್ಟು 8 ವಿಭಾಗಗಳಿದ್ದು 4 ಪ್ರಯೋಗಾಲಯಗಳು ಸದ್ಯ ಚಾಲ್ತಿಯಲ್ಲಿದ್ದು, ಅತ್ಯಂತ ಗುಣಮಟ್ಟದ ಹಾಗೂ ಬೆಲೆಬಾಳುವ ಉಪಕರಣಗಳು ಇದ್ದು, ಇದನ್ನು ಅತೀ ಜಾಗೃತಿ ಹಾಗೂ ಹೆಚ್ಚರಿಕೆಯಿಂದ ನೋಡಿಕೊಳ್ಳಬೇಕು ಹಾಗೂ ದಿನನಿತ್ಯದ ನಿರ್ವಹಣೆ ಮಾಡಲು ಪ್ರತಿ ಪ್ರಯೋಗಾಲಯಗಳಿಗೆ ಲ್ಯಾಬ್ ಅಸಿಸ್ಟಂಟ್/ಲ್ಯಾಬ್ ಟೆಕ್ನೀಶಿಯನ್ ಇವರುಗಳ ಅತ್ಯವಶ್ಯಕತೆ ಇರುತ್ತದೆ, ಇಲ್ಲದಿದ್ದರೆ ವಿದ್ಯಾರ್ಥಿಗಳ ಪ್ರಾಯೋಗಿಕ ತರಗತಿಗಳು ಹಾಗೂ ಪ್ರಾಯೋಗಿಕ ಪರೀಕ್ಷಾ ಸಮಯದಲ್ಲಿ ಉಪಕರಣಗಳಿಗೆ ಹಾನಿ ಉಂಟು ಆಗುವ ಸಂಭವಿರುವುದರಿಂದ ಲ್ಯಾಬ್ ಟೆಕ್ನೀಶಿಯನ್ ಅವರ ಅವಶ್ಯಕತೆ ಇರುತ್ತದೆ, ವಿಶ್ವವಿದ್ಯಾಲಯವು ಕೂಡಲೇ ನೇಮಿಸಬೇಕೆಂದು ವಿವರಿಸಿದರು. ಸಿಂಡಿಕೇಟ್ ಸಭೆಯು ಈ ವಿಷಯವನ್ನು ಪರಿಶೀಲಿಸಿ ಹಾಗೂ ಈ ವಿಚಾರವನ್ನು ಚರ್ಚಿಸಿ, ವಿಜ್ಞಾನ ವಿಭಾಗಗಳ ಪ್ರಯೋಗಾಲಯಗಳನ್ನು ನಿರ್ವಹಿಸಲು ಈಗ ಇರುವ 4 ಪ್ರಯೋಗಾಲಯಗಳಿಗೆ (ರಾಸಾಯನಶಾಸ್ತ್ರ, ಭೌತಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಉಪಕರಣಾತ್ಮಕ ತಂತ್ರಜ್ಞಾನ) ಲ್ಯಾಬ್ ಅಸಿಸ್ಟೆಂಟ್‌ಗಳು ಅತ್ಯಂತ ಅವಶ್ಯಕವಾಗಿದ್ದು, ವಿಶ್ವವಿದ್ಯಾಲಯದ ವಿಜ್ಞಾನ ವಿಭಾಗದ ಅವಶ್ಯಕತೆಗನುಗುಣವಾಗಿ ಲ್ಯಾಬ್ ಅಸಿಸ್ಟೆಂಟ್‌ಗಳನ್ನು ನೇಮಕ ಮಾಡಿಕೊಳ್ಳಲು ಸ್ಥಳೀಯ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ, ನೇರ ಸಂದರ್ಶನ ನಡೆಸುವ ಮುಖಾಂತರ 11 ತಿಂಗಳು ಅಥವಾ ಮುಂದಿನ ಆದೇಶದವರೆಗೆ ನೇಮಿಸಿ, ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಸ್ಟಮ್ ಅನಾಲಿಸ್ಟ್ ಅವರಿಗೆ |

| | | |
|---|---|---|
| | | ಸಮಾನರಾಗಿ ಗುರುತಿಸಿ, ಅವರಿಗೆ ನಿಗದಿಪಡಿಸಿರುವ ಮಾಸಿಕ 18 ಸಾವಿರ ರೂ. ರಂತೆ ಸಂಚಿತ ವೇತನ ನೀಡಿ, ತಾತ್ಕಾಲಿಕವಾಗಿ ನೇಮಿಸಿಕೊಳ್ಳುವುದಾಗಿ ಸಭೆಯು ಸಹಮತದಿಂದ ಒಪ್ಪಿಗೆ ಸೂಚಿಸಿ, ಅನುಮೋದಿಸಿತು. |
| 04. | ಕುಲಸಚಿವರು, ವಿಶ್ವವಿದ್ಯಾಲಯದ ಕಾರ್ಯಭಾರಕ್ಕೆ ಅನುಗುಣವಾಗಿ ಅತ್ಯವಶ್ಯಕವಿರುವ ಕೆಲಸಗಾರರು (ಸಿ ದರ್ಜೆ ನೌಕರರು, ಸ್ವಚ್ಛಗಾರರು, ಸಿಪಾಯಿಗಾರರು, ಹಾಗೂ ಸೆಕ್ಯೂರಿಟಿಗಾರ್ಡ್‌ಗಳು) ಬೇಕಾಗಿರುವುದರ ಬಗ್ಗೆ ಚರ್ಚಿಸಲು ಅಧ್ಯಕ್ಷರ ಅನುಮತಿ ಕೋರಿದರು. | 4) ಕರ್ನಾಟಕ ಸರ್ಕಾರದಿಂದ ಮಂಜೂರಾದ 36 ಬೋಧಕೇತರ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಕೆಟಿಪಿಪಿ ಕಾಯ್ದೆ ಪ್ರಕಾರ ವಿಶ್ವವಿದ್ಯಾಲಯಕ್ಕೆ ಅನುಮತಿ ನೀಡಿರುತ್ತದೆ. ಈ ಟೆಂಡರ್ ಪ್ರಕ್ರಿಯೆಯು ನಡೆದಿದ್ದು, ಮೊದಲನೇ ಬಾರಿಗೆ (First call) ನಲ್ಲಿ ಕೇವಲ ಒಬ್ಬರೇ ಬಿಡ್ಡುದಾರ ಅರ್ಹತೆ ಹೊಂದಿರುವ ಕಾರಣ ಮರು ಟೆಂಡರ್ ಮಾಡಲಾಗಿದ್ದು, 2ನೇ ಕರೆ (Second call) ಮಾಡಿ ಟೆಂಡರ್ ನಿಯಮಾವಳಿಗಳ ಪ್ರಕಾರ ವಿಶ್ವವಿದ್ಯಾಲಯಕ್ಕೆ ಹೊರ ಗುತ್ತಿಗೆ ಆಧಾರದಲ್ಲಿ 36 ಜನ ಬೋಧಕ ಸಿಬ್ಬಂದಿಗಳನ್ನು ದಿನಾಂಕ 26.03.2023 ರಂದು ಗುತ್ತಿಗೆದಾರರು ವಿಶ್ವವಿದ್ಯಾಲಯಕ್ಕೆ ಒದಗಿಸಿರುತ್ತಾರೆ. ಈ ಹಿಂದೆ ಕುಲಪತಿಗಳ ಅಧಿಕಾರಡಿಯಲ್ಲಿ ಸಂಚಿತ ವೇತನ ಅನುಸಾರ ನೇಮಕವಾಗಿ ಕಾರ್ಯನಿರ್ವಹಿಸುತ್ತಿದ್ದಂತಹ ಬೋಧಕೇತರ ಸಿಬ್ಬಂದಿಗಳನ್ನು ದಿನಾಂಕ 28.02.2023 ರಿಂದ ನಿಗದಿಪಡಿಸಿದ ಕಾರ್ಯಗಳಿಂದ ಸಾಮಾನ್ಯ ಸುತ್ತೋಲೆ ಅನುಸಾರ ಬಿಡುಗಡೆಗೊಳಿಸಲಾಗಿತ್ತು, ಆದರೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆ ಇನ್ನೂ ನಡೆಯುತ್ತಿದ್ದ ಪ್ರಯುಕ್ತ ವಿಶ್ವವಿದ್ಯಾಲಯದ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗದಂತೆ ಕುಲಪತಿಗಳ ಅಧಿಕಾರದಡಿಯಲ್ಲಿ ಬಿಡುಗಡೆಗೊಂಡ ಸಿಬ್ಬಂದಿಗಳನ್ನು (ದಿನಾಂಕ 02.03.2023 ರಿಂದ 26.03.2023) ದಿನದವರೆಗೆ ದಿನಗೂಲಿ ಆಧಾರದ ಮೇಲೆ ಮುಂದುವರೆಸಿ, ಇವರಿಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ದಿನಗೂಲಿ ಬಿಡುಗಡೆ ಮಾಡಬೇಕೆಂದು ಕುಲಪತಿಗಳು ಆದೇಶಿಸಿದರು. ಈ ಆದೇಶದ ಬಗ್ಗೆ ಸಭೆಯಲ್ಲಿ ಕುಲಂಕೂಶವಾಗಿ ಪರಿಶೀಲಿಸಿ, ಕುಲಪತಿಗಳ ಆದೇಶವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿ, ಅನುಮೋದನೆ ನೀಡಿತು.<br><br>ಮುಂದುವರೆದು ಹೊರಗುತ್ತಿಗೆ ಆಧಾರದ ಮೇಲೆ 36 ಸಿಬ್ಬಂದಿಗಳ ನೇಮಕಾತಿ ಹಾಗೂ ಕಾರ್ಯಭಾರಕ್ಕನುಗುಣವಾಗಿ ಹಂಚಿಕೆಯಾದ ನಂತರ ವಿಶ್ವವಿದ್ಯಾಲಯದ ಇನ್ನೂಳಿದ ವಿಭಾಗಗಳ, ವಸತಿನಿಲಯಗಳ ಹಾಗೂ ವಿವಿಧ ಕಛೇರಿಗಳ ಕಾರ್ಯಭಾರಕ್ಕೆ ಅನುಗುಣವಾಗಿ ಬೇಕಾಗಿರುವ ತಾತ್ಕಾಲಿಕ (ಸ್ವಚ್ಛಗಾರರು/ಸಿಪಾಯಿಗಾರರು/ಸೆಕ್ಯೂರಿಟಿಗಾರ್ಡ್‌ಗಳ) ಸಿಬ್ಬಂದಿಗಳನ್ನು ದಿನಗೂಲಿ ಆಧಾರದ ಮೇಲೆ ಕುಲಪತಿಗಳ ಅಧಿಕಾರದಡಿಯಲ್ಲಿ ನೇಮಿಸಿ, ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ದಿನಗೂಲಿ ಬಿಡುಗಡೆ ಮಾಡುವ ಸಂಬಂಧ ಸರ್ಕಾರದ ಅನುಮತಿಗಾಗಿ ಪತ್ರ ಬರೆದು ಮನವಿ ಮಾಡಲು ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಿ, ತೀರ್ಮಾನಿಸಲಾಯಿತು. |

| | | |
|---|---|---|
| 05. | ಮಾನ್ಯ ಕುಲಪತಿಗಳು, ಸರ್ಕಾರದ ಕ್ರೀಯಾಯೋಜನೆಯಲ್ಲಿ ಅನುಮೋದನೆಗೊಂಡ ವಿಜ್ಞಾನ ವಿಭಾಗಗಳ ಪ್ರಯೋಗಾಲಯ ಉಪಕರಣಗಳ ಖರೀದಿಯನ್ನು ಭೌತಶಾಸ್ತ್ರ, ರಾಸಾಯನಶಾಸ್ತ್ರ ವಿಭಾಗಕ್ಕೆ 119.85 ಲಕ್ಷಗಳು ರೂ. ಪ್ರಯೋಗಾಲಯ ಉಪಕರಣಗಳನ್ನು ಖರೀದಿಸಲಾಗಿದ್ದು, ಈಗ ಸೂಕ್ಷ್ಮ ಜೀವಶಾಸ್ತ್ರ, ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಉಪಕರಣಾತ್ಮಕ ತಂತ್ರಜ್ಞಾನ ಹಾಗೂ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಸ್ಟುಡಿಯೋ ಲ್ಯಾಬ್‌ಗೆ ಅವಶ್ಯಕತೆ ಇರುವ ಉಪಕರಣಗಳು ಹಾಗೂ ರಾಸಾಯನಶಾಸ್ತ್ರ ಪ್ರಯೋಗಾಲಯಕ್ಕೆ ಇನ್ನೂ ಹೆಚ್ಚುವರಿ ಉಪಕರಣಗಳ ಅವಶ್ಯಕತೆ ಇರುವ ಬಗ್ಗೆ ವಿಜ್ಞಾನ ವಿಭಾಗದ ಮುಖ್ಯಸ್ಥರು ನೀಡಿರುವ ಬೇಡಿಕೆಯ ಪತ್ರದ ಬಗ್ಗೆ ತಿಳಿಸುತ್ತಾ, ಈ ವಿಭಾಗಗಳ ಉಪಕರಣಗಳ ಖರೀದಿಯನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸುವ ಬಗ್ಗೆ ವಿಷಯ ಮಂಡಿಸಿದರು. | 5) ರಾಯಚೂರು ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಮಂಜೂರಾದ 15 ಕೋಟಿಗಳ ರೂ.ಗಳಲ್ಲಿ ಅದನ್ನು ಸರ್ಕಾರದ ನಿರ್ದೇಶನದಂತೆ, ಕ್ರೀಯಾಯೋಜನೆಯಲ್ಲಿ ಅನುಮೋದನೆಗೊಂಡಂತೆ, ಮಾಡ್ಯೂಲರ್ ಲ್ಯಾಬ್ ನಿರ್ಮಾಣಕ್ಕೆ 292.50 ಲಕ್ಷಗಳು ರೂ. ಹಾಗೂ ವಿಜ್ಞಾನ ವಿಭಾಗಗಳ ಉಪಕರಣಗಳ ಖರೀದಿಗೆ 150.00 ಲಕ್ಷ ರೂಗಳನ್ನು ಮೀಸಲಿಡಲಾಗಿರುತ್ತದೆ. ಇದರಲ್ಲಿ ರಾಸಾಯನಶಾಸ್ತ್ರ ಹಾಗೂ ಭೌತಶಾಸ್ತ್ರ ವಿಭಾಗಗಳ ಉಪಕರಣಗಳ ಖರೀದಿಗೆ ಸಂಬಂಧಿಸಿದಂತೆ 119.85 ಲಕ್ಷ ರೂ. ವ್ಯಯಿಸಲಾಗಿರುತ್ತದೆ. ಮೀಸಲಿಟ್ಟ ಖಾತೆಯಲ್ಲಿ 30.14 ಲಕ್ಷಗಳು ರೂ.ಉಳಿದಿರುತ್ತದೆ.<br>ಮುಂದುವರೆದು ವಿಶ್ವವಿದ್ಯಾಲಯದ ಜೀವ ವಿಜ್ಞಾನಕ್ಕೆ ಸಂಬಂಧಪಟ್ಟ ವಿಭಾಗಗಳಾದ ಸೂಕ್ಷ್ಮಜೀವಶಾಸ್ತ್ರ, ಸಸ್ಯಶಾಸ್ತ್ರ ಹಾಗೂ ಪ್ರಾಣಿಶಾಸ್ತ್ರ ವಿಭಾಗಗಳ ಪಠ್ಯಕ್ರಮಕ್ಕನುಗುಣವಾಗಿ ಪ್ರಯೋಗಾಲಯ ಹಾಗೂ ಪ್ರಯೋಗಾಲಯದ ಉಪಕರಣಗಳ ಅವಶ್ಯಕತೆ ಬಗ್ಗೆ ವಿಭಾಗದ ಮುಖ್ಯಸ್ಥರು ಪತ್ರದ ಮುಖಾಂತರ ಮನವಿ ನೀಡಿದ್ದಾರೆ ಎಂದು ತಿಳಿಸಿದರು. ರಾಸಾಯನಶಾಸ್ತ್ರ ವಿಭಾಗಕ್ಕೆ ಹೆಚ್ಚುವರಿ ಉಪಕರಣಗಳನ್ನು ನಿಯಮನುಸಾರ ಕೆಪಿಟಿಟಿ ಕಾಯ್ದೆ/ಜಮ್ ಪ್ರಕಾರ ಖರೀದಿಸಲು ಹಾಗೂ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳಿಂದ ಭರಿಸಲು ಸಭೆಯು ಸಮ್ಮತಿಸಿ, ಅನುಮೋದನೆ ನೀಡಿತು. ಸೂಕ್ಷ್ಮಜೀವಶಾಸ್ತ್ರ, ಸಸ್ಯಶಾಸ್ತ್ರ ಹಾಗೂ ಪ್ರಾಣಿಶಾಸ್ತ್ರ ವಿಭಾಗಗಳಿಗೆ ವಿಶ್ವವಿದ್ಯಾಲಯವು ವಿಷಯ ತಜ್ಞರ ಸಮಿತಿಯನ್ನು ರಚಿಸಿ, ಪಠ್ಯಕ್ರಮಕ್ಕನುಗುಣವಾಗಿ ತಜ್ಞರು ನೀಡುವಂತಹ ಉಪಕರಣಗಳ ಪಟ್ಟಿಯನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ನಿರ್ಧರಿಸಬಹುದೆಂದು ತೀರ್ಮಾನಿಸಿದರು. |

21/6/23

(ಪ್ರೊ. ವಿಶ್ವನಾಥ ಎಂ.)
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.

21/6/2023

(ಪ್ರೊ. ಹರೀಶ್ ರಾಮಸ್ವಾಮಿ)
ಕುಲಪತಿಗಳು ಹಾಗೂ ಸಭೆಯ ಅಧ್ಯಕ್ಷರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.